ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿ.ಪ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 21, ಸ್ಯ 1876.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಜುಡಿಷಿಯಲ್ ಕಮ್ಮಿಷನರ್ ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ಗಳು.

ಜುಡಿಷಿಯಲ್ ಇಲಾಖೆ.

ಇಸ್ತಿಹಾರ್‌ಗಳು.

ತಾರೀಖು 20ನೇ ಅಕ್ಟೋಬರ್ 1876.

ಮೈಸೂರು ಧೊರೆಗಳ ಸೀಮೆಯ ಜುಡಿಷಿಯಲ್ ಕಮ್ಮಿಷನರವರ ಕೋರ್ಟಿನಲ್ಲಿ ಸಿವಿಲ್ ವ ಕ್ರಿಮಿನಲ್ ಅಪ್ಪೀಲ್‌ಗಳು ಮತ್ತು ಪ್ರೂಪ್ ಅರ್ಜಿಗಳು ಸಹ ಹಿಯರಿಂಗ್ ಮಾಡಲ್ಪಡುವ ತಾರೀಖನ್ನು ತೋರಿಸುವ ತಖ್ತಾ.

ನಂಬರ್.	ಅಪ್ಪೀಲ್ವಾದಿಗಳು ಮತ್ತು ಅರ್ಜಿದಾರರಹೆಸರು.	ಪ್ರತಿವಾದಿಗಳ ಹೆಸರು.	ಹಿಯರಿಂಗ್ ತಾರೀಖು.
ಸ್ಪಿ. ಅ. ೪೯	ಚರಂತಪ್ಪ ..	ಜನ್ನವೀರಪ್ಪ ವಗೈರೆ ..	೨೪ನೇ ಅಕ್ಟೋಬರ್
ಸ್ಪಿ. ಅ. ೫೪	ರಾಮಣ್ಣ ..	ಜವರನಾಯಕ ವಗೈರೆ ..	ಡಿಟೋ.
ಪ್ರೂಪ್. ಸ್ಪಿ. ಅ. ೧೧	ಕಾಂಪತೈಯ ..	ಮುನಿಯಪ್ಪ ವಗೈರೆ ..	ಡಿಟೋ
ಕ್ರಿ. ಪಿಟೀಷನ್ ೨೭	ಗರುಡಾಚಾರಿ ..	.. ..	ಡಿಟೋ
ಸ್ಪಿ. ಅ. ೬೧	ಬಸವೇಗೌಡ ..	ಶಿದ್ದೇಗೌಡ ..	೨೪ನೇ ಡಿಟೋ
ಡಿ॥ ೬೨.	ತಿ. ಪುಟ್ಟೇಗೌಡ ..	ಟಿ. ಪುಟ್ಟೇಗೌಡ ..	ಡಿಟೋ
ಕೊ. ಸ್ಪಿ. ಅ. ೧೧	ಮೇದೈಯ ..	ಮಾದೈಯ ವಗೈರೆ ..	೩೦ನೇ ಡಿಟೋ
ಪ್ರೂಪ್ ಸ್ಪಿ. ಅ. ೧೦	ವೆಂಕಟರಾಜೇಅರಸು ..	ಸುಬ್ಬಶೆಟ್ಟಿ ..	೨೦ನೇ ನವಂಬರ್
ಪ್ರೂಪ್ ಸ್ಪಿ. ಅ. ೧೨	ಶೇತಮ್ಮ ..	ಲಿಂಗೇಗೌಡ ..	ಡಿಟೋ
ಸ್ಪಿ. ಅ. ೬೪	ಕವನೀಪತೈಯ ..	ನಂಜಮ್ಮ ..	೩ನೇ ಡಿಟೋ
ಸ್ಪಿ. ಅ. ೫೩	ವುಮ್ಮಾಜಿ ..	ಸುಬ್ಬಣ್ಣ ವಗೈರೆ ..	ಡಿಟೋ
ಸ್ಪಿ. ಅ. ೬೩	ಪಿ॥ ಮರಗಲರ್ ವಗೈರೆ ..	ಗಂಗಾಧರಶೆಟ್ಟಿ ..	೧೧ನೇ ಡಿಟೋ
ಸ್ಪಿ. ಅ. ೬೫	ಚಿಕ್ಕ ಹೊನ್ನೇಗೌಡ ..	ಲಕ್ಷ್ಮೈಯ ವಗೈರೆ ..	೧೪ನೇ ಡಿಟೋ
ಸ್ಪಿ. ಅ. ೬೬	ಶ್ರೀನಿವಾಸೈಯ ..	ಅಳಿಂಗೈಯ ..	ಡಿಟೋ

ಮೈಸೂರು ಮತ್ತು ಕೊಡಗು ಶೀಮೆಗಳ ಜುಡಿಷಲ್ ಕಮ್ಮಿಷನ್ನರವರು, ಸ್ಯ 1873ನೇ ಇಸವಿ 10ನೇ ನಂಬರ್ ಆಕ್ಟ್ 7ನೇ ಸೆಕ್ಷರ್ ಅನುಸರಿಸಿ ಈ ಕೆಳಗೆ ನಮೂದಿಸಿ ಯಿರುವ ಪ್ರಕಾರ ಪ್ರಮಾಣ ವಚನಗಳ ನಿಬಂಧನೆಗಳನ್ನು ಫಿರ್ಯಡಿಸಿ ಯಿರುತ್ತಾರೆ.

ಪ್ರಮಾಣ ಮಾಡಿಸಲ್ಪಡತಕ್ಕ ಕ್ರಿಶ್ಚಿಯರ್ ಸಾಕ್ಷಿ ಯಿಂಟರ್ ಪ್ರಟರ್ ಯಾ ಜೂರರ್ ತನ್ನ ಕೈಯಲ್ಲಿ ಬೈಬಿಲ್ ಬುಕ್ಕನ್ನು ತೆಗದುಕ್ಕೊಂಡು "ಹಾಗೆಯೇ ದೇವರು ನನಿಗೆ ಸಹಾಯ ಮಾಡಲಿ" ಯಂದು ನುಡಿಯುತ್ತಾ ಆ ಬುಕ್ಕಿಗೆ ಮುದ್ದಿಡತಕ್ಕದ್ದು.

ಇತರ ಸಂದರ್ಭಗಳಲ್ಲಿ, 8ನೇ ಸೆಕ್ಷರ್ ಪ್ರಕಾರ ಪ್ರಮಾಣ ಮಾಡಿಸಲ್ಪಡತಕ್ಕ ಕಕ್ಷಿಗಾರ ಯಾ ಸಾಕ್ಷಿಯು ತಾನು ಮನಃ ಪೂರ್ತಿಯಾಗಿ ಬದ್ಧನಾಗುತ್ತೇನೆಂದು ಎಣಿಸತಕ್ಕ ಪ್ರಮಾಣದ ಮೇರಿಗೆ ಪ್ರಮಾಣ ಮಾಡಿಸಲ್ಪಡತಕ್ಕದ್ದು.

(1.) ವಚ್ಚ ಸಾಕ್ಷಿಯವನಿಗೆ.

ಪ್ರಮಾಣ ಮಾಡಿಸತಕ್ಕ ರೀತಿ.

ಈಗ ಕೋರ್ಟು ರೂಬರೂ, ಈ ಮೊಕದ್ದಮೂ ಸಂಗತಿಯನ್ನ ಕುರಿತು ನೀನು ಕೊಡುವ ಸಾಕ್ಷ್ಯವು ನಿಶ್ಚಯವಾದ್ದಾಗಿ ಯಿರತಕ್ಕದ್ದು, ಯಲ್ಲಾ ನಿಶ್ಚಯವಾಗಿ ಯಿರತಕ್ಕದ್ದು. ನಿಶ್ಚಯ ವಿಲ್ಲದೆ ಬೇರೆ ಯಿರಕೂಡದು.

ಹಾಗೆಯೇ ದೇವರು ನಿನಿಗೆ ಸಹಾಯ ಮಾಡಲಿ.

ಪ್ರಮಾಣ ಮಾಡತಕ್ಕ ರೀತಿ.

ನಾನು ಯೀನು ಹೇಳುತ್ತೇನೋ ಅದು ನಿಶ್ಚಯವು, ಯಲ್ಲಾ ನಿಶ್ಚಯವು, ನಿಶ್ಚಯವಲ್ಲದೆ ಮತ್ತೆ ಬೇರೆ ಯಿಲ್ಲವೆಂದು ಸರ್ವ ಜೈತನಾದ ಭಗವಂತನ ಸಾನ್ನಿಧ್ಯದಲ್ಲಿ ಸತ್ಯವಾಗಿ ಹೇಳುತ್ತೇನೆ.

(2.) ವಚ್ಚ ಯಿಂಟರ್ ಪ್ರಿಟರಿಗೆ.

(ಕೋರ್ಟು ಯಿಂಟರ ಪ್ರಟರ ವಿನಹಾಯಿಸಿ.)

ಪ್ರಮಾಣ ಮಾಡಿಸತಕ್ಕ ರೀತಿ.

ಕೋರ್ಟು ರೂಬರೂ ಸಾಕ್ಷಿಗಳಿಗೆ ಹಾಕಿದ ಸವಾಲುಗಳನ್ನು ಅವರು ಕೊಟ್ಟ ಸಾಕ್ಷ್ಯವನ್ನು ನಿನ್ನ ತಿಳುವಳಿಕೆ ಮತ್ತು ಚಾತುರ್ಯತೆಗೆ ಕೂಡಿದ ವೊಟ್ಟಿಗೂ ಸರಿಯಾಗಿಯೂ ನಿಜವಾಗಿಯು ತರ್ಜುಮೆ ಮಾಡಿ ತಿಳಿಸತಕ್ಕದ್ದು.

ಹಾಗೆಯೇ ದೇವರು ನಿನಿಗೆ ಸಹಾಯ ಮಾಡಲಿ.

ಪ್ರಮಾಣ ಮಾಡತಕ್ಕ ರೀತಿ.

ಕೋರ್ಟು ರೂಬರೂ ಸಾಕ್ಷಿಗಳಿಗೆ ಹಾಕಿದ ಸವಾಲುಗಳನ್ನು ಅದಕ್ಕೆ ಅವರು ಕೊಡತಕ್ಕ ಜವಾಬುಗಳನ್ನು ಸಹಾ ನನ್ನ ತಿಳುವಳಿಕೆ ಮತ್ತು ಚಾತುರ್ಯತೆಗೆ ಕೂಡಿದ ವೊಟ್ಟಿಗೂ ಸರಿಯಾಗಿಯೂ ನಿಜವಾಗಿಯೂ ತರ್ಜುಮೆ ಮಾಡಿ ತಿಳಿಸುತ್ತೇನೆಂದು ಸರ್ವ ಜೈತನ್ಯನಾದ ಭಗವಂತನ ಸಾನ್ನಿಧ್ಯದಲ್ಲಿ ಪ್ರಮಾಣವಾಗಿ ಹೇಳುತ್ತೇನೆ.

(3) ಜೂರರಿಗೆ.

ಪ್ರಮಾಣ ಮಾಡಿಸತಕ್ಕ ರೀತಿ.

ಈ ಮೊಕದ್ದಮೆಯಲ್ಲಿ ಜೂರರಿಗೆ ತಿಳಿಸಲ್ಪಟ್ಟ ಅಂಶಗಳನ್ನು ನೀನು ನ್ಯಾಯವಾಗಿಯೂ ನಿಜವಾಗಿಯೂ ವಿಚಾರಿಸಿ ತೀರ್ಮಾನಿಸತಕ್ಕದ್ದಲ್ಲದೆ ರುಜುವಾತ ಅನುಸರಿಸಿ ನಿಜವಾದ ತೀರ್ಪನ್ನು ಕೊಡತಕ್ಕದ್ದು.

"ಹಾಗೆಯೇ ದೇವರು ನಿನಿಗೆ ಸಹಾಯ ಮಾಡಲಿ."

ಪ್ರಮಾಣ ಮಾಡತಕ್ಕ ರೀತಿ.

ಈ ಮೊಕದ್ದಮೆಯಲ್ಲಿ ಜೂರರಿಗೆ ತಿಳಿಸಲ್ಪಟ್ಟ ಅಂಶಗಳನ್ನು ನ್ಯಾಯವಾಗಿಯೂ ನಿಜವಾಗಿಯೂ ವಿಚಾರಿಸಿ ತೀರ್ಮಾನಿಸುವದಲ್ಲದೆ ರುಜುವಾತ ಅನುಸರಿಸಿ ನಿಜವಾದ ತೀರ್ಪನ್ನು ಕೊಡುತ್ತೇನೆಂದು ಸರ್ವ ಜೈತನ್ಯನಾದ ಭಗವಂತನ ಸಾನ್ನಿಧ್ಯದಲ್ಲಿ ಸತ್ಯವಾಗಿ ಹೇಳುತ್ತೇನೆ.

J. D. GORDON, *Judl. Commr.*